ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:-ಎಡಿಎಂ2(1)ಶಿ.ರಾ.ಪ್ರ-01/2019-20. ದಿನಾಂಕ:14-06-2019.

**-:ಸುತ್ತೋಲೆ:-**

ವಿಷಯ:-2018 ನೇ ಸಾಲಿನ **"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಮತ್ತು ಜಿಲ್ಲಾ ಆಯ್ಕೆ ಸಮಿತಿಗೆ ಆಯ್ಕೆ ಪ್ರಕ್ರಿಯೆಗೆ ನೀಡಲಾಗಿದ್ದ ಅವಧಿಯ ವಿಸ್ತರಣೆಯ ಕುರಿತು.

ಉಲ್ಲೇಖ: 1. ಈ ಕಛೇರಿಯ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ:14.05.2019.

2. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರಿಂದ ಇ-ಮೇಲ್ ಮೂಲಕ ಸ್ವೀಕೃತವಾಗಿರುವ ಪತ್ರ ದಿನಾಂಕ:14.06.2019 ರಂತೆ.

3. ಈ ಕಛೇರಿಯ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ:12.06.2019.

*******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-01 ರ ಪತ್ರದ ಅನುಸಾರ 2018 ನೇ ಸಾಲಿನ **"ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ,

1. ರಾಜ್ಯ ಸರ್ಕಾರದ ಶಾಲೆಗಳು, ಅನುದಾನಿತ ಶಾಲೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿರುವ ಶಾಲೆಗಳಲ್ಲಿನ ಖಾಯಂಗೊಂಡ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು.
2. ಕೇಂದ್ರ ಸರ್ಕಾರದ ಮತ್ತು ಸಿ.ಬಿ.ಎಸ್.ಇ ಮತ್ತು ಸಿ.ಐ.ಎಸ್.ಸಿ.ಇ ಮಾನ್ಯತೆ ಪಡೆದ ಶಾಲೆಗಳ ಖಾಯಂಗೊಂಡ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು.

ಸ್ವಯಂ ತಾವೇ ಆನ್ ಲೈನ್ ಮೂಲಕ (http://www.nationalawardtoteachers.com ಅಂತರ್ಜಾಲ ತಾಣದ ಮೂಲಕ) ಅರ್ಜಿ ಸಲ್ಲಿಸಲು ದಿನಾಂಕ:06-05-2019 ರಿಂದ 15-06-2019 ರವರೆಗೆ ನಿಗದಿಪಡಿಸಲಾಗಿದ್ದ ಅವಧಿಯನ್ನು ಉಲ್ಲೇಖ-02 ರ ಪತ್ರದ ಅನುಸಾರ **ದಿನಾಂಕ:19-06-2019 ರವರೆಗೆ** ವಿಸ್ತರಿಸಲಾಗಿದೆ.

ಈ ಕುರಿತು ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು (ಆಡಳಿತ ) ರವರುಗಳು ತಮ್ಮ-ತಮ್ಮ ವ್ಯಾಪ್ತಿಯಲ್ಲಿನ ಶಿಕ್ಷಕರಿಗೆ ವ್ಯಾಪಕ ಪ್ರಚಾರದ ಮೂಲಕ ಮಾಹಿತಿಯನ್ನು ನೀಡುವುದು ಮತ್ತು ಕಛೇರಿ ಸೂಚನಾ ಫಲಕಯಲ್ಲಿ ಅಳವಡಿಸುವುದರ ಮೂಲಕ ಶಿಕ್ಷಕರ ಗಮನಕ್ಕೆ ತರುವುದು.

ಮುಂದುವರೆದು, ಜಿಲ್ಲಾ ಆಯ್ಕೆ ಸಮಿತಿ(ಡಿಎಸ್‌ಸಿ)ಗಳಿಗೆ ಪ್ರಥಮ ಹಂತದ ಆಯ್ಕೆಗೆ ಉಲ್ಲೇಖ-03 ರ ಪತ್ರದ ಅನುಸಾರ ನಿಗದಿಪಡಿಸಲಾಗಿದ್ದ ದಿನಾಂಕ: 16-06-2019 ರಿಂದ 07-07-2019 ರವರೆಗಿನ ಅವಧಿಯನ್ನು ಉಲ್ಲೇಖ-02 ರ ಪತ್ರದ ಅನುಸಾರ **ದಿನಾಂಕ: 20-06-2019 ರಿಂದ 10-07-2019 ರವರೆಗೆ ಮರು ನಿಗದಿಪಡಿಸಲಾಗಿದೆ**. ಉಳಿದ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

(ಎಂ.ಪಿ.ಮಾದೇಗೌಡ)

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)(ಹೆ.ಪ್ರ)

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) & (ಅಭಿವೃದ್ಧಿ) , ಸಾ.ಶಿ.ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರುಗಳಿಗೆ.

3. ಇಲಾಖಾ ಅಂತರ್ಜಾಲ ತಾಣದಲ್ಲಿ ಮೇಲ್ಕಂಡಂತೆ ಕೊಂಡಿಯನ್ನು(ಲಿಂಕ್) ಜೋಡಿಸಲು ಮತ್ತು ಮುಖ ಪುಟದಲ್ಲಿ ದಿನಾಂಕ:07.07.2019 ರವರೆಗೆ ಕಾಣುವಂತೆ ಅಳವಡಿಸಲು ಈ ಕಛೇರಿಯ ಇ–ಆಡಳಿತ ಘಟಕಕ್ಕೆ.
4. ಹಿರಿಯ ಸಹಾಯಕ ನಿರ್ದೇಶಕರು(ಸಾರ್ವಜನಿಕ ಸಂಪರ್ಕ ಮತ್ತು ಶಿಕ್ಷಣ ವಾರ್ತೆ) ಇವರಿಗೆ ಶಿಕ್ಷಣ ವಾರ್ತೆಯಲ್ಲಿ ಪ್ರಕಟಿಸಲು.

ಪ್ರತಿಯನ್ನು ಮಾಹಿತಿಗಾಗಿ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಯರವರಿಗೆ ಸಲ್ಲಿಸುತ್ತಾ ಆಯುಕ್ತರ ಆದ್ಯ ಗಮನಕ್ಕೆ ತರಲು ಕೋರಿದೆ.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ವಂದನಾಪೂರ್ವಕವಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ. ಇವರುಗಳಿಗೆ.
5. ನಿರ್ದೇಶಕರು, (ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು (ಡಿ.ಎಸ್.ಇ.ಆರ್.ಟಿ), ಬನಸಂಕರಿ ರಿಂಗ್ ರಸ್ತೆ, ಬೆಂಗಳೂರು.
7. ಸಹ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ ರಸೆ, ಬೆಂಗಳೂರು.
8. ಕಛೇರಿ ಪ್ರತಿ.